# ಹಾವೇರಿ ಪ್ರದೇಶದ ಕೆರೆಗಳ ನಿರ್ಮಾಣದ ಕ್ರಮಗಳು

**ನಾಗರಾಜ ತಳವಾರ[1] & ವೈ. ಮದ್ದಾನಸ್ವಾಮಿ[2]**

[1]ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.

[2]ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.

**DOI: https://doi.org/10.5281/zenodo.22662829**

## ABSTRACT:

ದಕ್ಷಿಣ ಭಾರತವನ್ನು ಒಳಗೊಂಡ ಕರ್ನಾಟಕದ ಭಾಗದ ಭೂ ಪ್ರದೇಶವನ್ನು ಆಳ್ವಿಕೆ ಮಾಡಿರುವಂತೆ ಹಾವೇರಿ ಪ್ರದೇಶದ ವ್ಯಾಪ್ತಿಗೆ ಒಳಪಟ್ಟು ಆಳ್ವಿಕೆ ಮಾಡಿದ ರಾಜಮನೆತನಗಳಾದ ಕದಂಬರು, ಬಾದಾಮಿ ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ವಿಜಯನಗರ ಅರಸರು ಹಾಗೂ ಅನೇಕ ಸ್ಥಳೀಯ ಮಾಂಡಲಿಕರು ತಮ್ಮದೇ ಆದ ಆಡಳಿತದ ಮಾರ್ಪಾಡುಗಳನ್ನು ಮಾಡಿಕೊಂಡು ಆಡಳಿತ ಮಾಡಿದ್ದಾರೆ. ಇವುಗಳು ಇತಿಹಾಸ ಪುಟದಿಂದ ಹಿಂದೆ ಸರಿದಿವೆ. ಆದರೆ ಆ ಕಾಲದಲ್ಲಿ ರಾಜ ಮಹಾರಾಜರು, ರಾಣಿಯರು, ಮಂತ್ರಿಗಳು, ದಂಡನಾಯಕರು, ಶ್ರೀಮಂತ ವರ್ಗದವರು ಹಾಗೂ ಜನಸಾಮಾನ್ಯರು ಸಮಾಜದ ಹಿತಕ್ಕಾಗಿ ಮಾಡಿದಂತಹ ಕೆಲಸ ಕಾರ್ಯಗಳ ಕುರುಹುಗಳಾಗಿ ಇಂದಿಗೂ ನಮ್ಮ ನಾಡಿನಲ್ಲಿ ಅಳಿದುಳಿದಿರುವಂತಹ ಕುರುಹುಗಳಾಗಿ ಲಭ್ಯವಾಗುತ್ತವೆ. ಇವುಗಳೆಂದರೆ ಶಾಸನಗಳು, ನಾಣ್ಯಗಳು, ದೇವಾಲಯಗಳು ಮತ್ತು ಸಾರ್ವಜನಿಕ ಕಟ್ಟಡಗಳು ರಕ್ಷಣೆಗಾಗಿ ನಿರ್ಮಾಣ ಮಾಡಿದಂತಹ ಕೋಟೆ ಕೊತ್ತಲಗಳು ಅದರಲ್ಲಿಯೂ ಪ್ರಮುಖವಾಗಿ ಕೆರೆ ಕಟ್ಟೆಗಳನ್ನು ನಿರ್ಮಾಣ ಮಾಡಿರುವುದನ್ನು ಈಗಲೂ ಸಹ ನಾವು ಇತಿಹಾಸದ ಆಧಾರಗಳಿಂದ ನೋಡಬಹುದಾಗಿದೆ. ಹಾವೇರಿ ಪ್ರದೇಶದಲ್ಲಿ ಹಾನಗಲ್ ತಾಲೂಕು-ಹಾನಗಲ್, ತಿಳುಳ್ಳಿ, ಅಕ್ಕಿಆಲೂರು, ಆಡೂರು, ಚಿಕ್ಕಬಾಸೂರು, ಹಿರೇಕೆರೂರು ತಾಲೂಕು – ಮದಗ್ ಮಾಸೂರು, ಹಿರೇಕೆರೂರು, ಹಂಸಭಾವಿ, ಮಡ್ಲೂರು, ಸಾತನಳ್ಳಿ, ಚಿಕ್ಕೇರೂರು, ಗುಡ್ಡದಮಾದಾಪುರ, & ಹಳ್ಳೂರು, ರಾಣೇಬೆನ್ನೂರು ತಾಲೂಕು– ಅಸುಂಡಿ, ಮೇಡ್ಲೇರಿ, ಗುಡ್ಡಗುಡೂರು, ಹೊನ್ನತ್ತಿ, ರಾಣೇಬೆನ್ನೂರು, ಬ್ಯಾಡಗಿ ತಾಲೂಕು– ಕಾಗಿನೆಲೆ, ಕದರಮಂಡಲಗಿ, ಸವಣೂರು ತಾಲೂಕು–ಮಾದಾಪುರ, ಮೊತಿತಲಾಬ್‌ಕೆರೆ, ಮಾದಾಪುರ, ಇವುಗಳಲ್ಲಿ ಹತ್ತಿಮತ್ತೂರು ಹಿರೇಕೆರೂರ, ಹಾನಗಲ್ಲು, ಚಿಕ್ಕೇರೂರು, & ಮದಗ್ ಮಾಸೂರು ಕೆರೆಗಳು ಈ ಪ್ರದೇಶದಲ್ಲಿ ಇರುವ ಪ್ರಸಿದ್ಧ ಕೆರೆಗಳಾಗಿವೆ. ಕೆರೆಯು ಹಲವಾರು ಆಕಾರಗಳಲ್ಲಿ ರಚಿತವಾಗುತ್ತಿತ್ತು. ಬಹುತೇಕ ಸ್ಥಳೀಯ ಭೌಗೋಳಿಕ

ಲಕ್ಷಣಗಳನ್ನು ಅನುಸರಿಸಿ ಕೆರೆಗಳು ತಮ್ಮ ಆಕಾರವನ್ನು ಪಡೆದುಕೊಳ್ಳುತ್ತಿದ್ದವು. ಹಾವೇರಿ ಪ್ರದೇಶದಲ್ಲಿ ಕೆರೆಗಳ ನಿರ್ಮಾಣದಲ್ಲಿ ಪ್ರಕೃತಿಯ ನೀರಿನ ಅನುಗುಣವಾಗಿ ಕಲ್ಲಿನ & ಮಣ್ಣಿನಿಂದ ವ್ಯವಸ್ಥಿತವಾಗಿ ಹಲವಾರು ಶೈಲಿಗಳಲ್ಲಿ ನಿರ್ಮಿಸಲಾಗಿದೆ ಎಂದು ಅಧ್ಯಯನದಿಂದ ತಿಳಿದುಬರುತ್ತದೆ.

## KEYWORDS:

ನೀರಾವರಿ ವ್ಯವಸ್ಥೆ, ಕೆರೆ ನಿರ್ಮಾಣ, ಜಲಾಶಯ, ತೂಬುಗಳು, ಸಮುದಾಯ, ವ್ಯವಸಾಯ, ಭೌಗೋಳಿಕ ಲಕ್ಷಣ, ತಂತ್ರಜ್ಞರು, ಆಯಕಟ್ಟಿನ ಪ್ರದೇಶ.

**ಪೀಠಿಕೆ:**

**ಕೆರೆಯಂ ಕಟ್ಟುಸು ಬಾವಿಯ ಸಮೆಸು ದೇವಾಗಾರಮಂ ಮಾಡಿಸ**
**ಜೋವೆಯೊಳಿಸಿಲ್ದನಾಥರಂ ಬಿಡಸು ಮಿತ್ರರ್ವಿರ್ಗಾಮ್ಮುಪೇಕ್ಸೈಂ ನಂಬಿಚ್**
**ಗೆರ್ಪಮೆಟ್ಟೋಗಿಲ್ ಶಿಷ್ಟರಂ ಪೊರೆಯೆನೆನುಸುತಿಯೆಂತೆಲ್ಲವಂ ಪಿಂಜೆತಾ**
**ಯೇವೆದಳಾಳಿಗೆಮಂದು ತೊಟ್ಟು ಕಿವಿಯೊಳಿಂ ಲಕ್ಷ್ಮೀಧರಾಯಾತ್ಮ್ಯಾನ್ಸಾ**

ಮೇಲೆ ಉಲ್ಲೇಖಿಸಿದ ಪದ್ಯವನ್ನು ವಿಜಯನಗರದ ಅರಸ ದೇವವರಾಯನ (ಕ್ರಿ.ಶ. 1406–22) ಮಂತ್ರಿ ಲಕ್ಷ್ಮೀಧರನು ಕೂಸಾಗಿದ್ದಾಗ ಅವನ ತಾಯಿ ಹಾಡಿ ಹಾಲೇರೆಯುತ್ತಿದ್ದರೆಂದು ಹಂಪೆಯ ಕಡಲೆಕಾಳು ಗಣೇಶನ ಗುಡಿಯ ಮುಂಭಾಗದ ಅಗಸೆಯಲ್ಲಿರುವ ಕ್ರಿ.ಶ. 1411 ಶಾಸನವು ತಿಳಿಸುತ್ತದೆ. (ಎಸ್.ಡಿ.ಆರ್., 14, ನಂ. 267) ಇದೇ ಶಾಸನವು ದೇವವರಾಯನ ಮಂತ್ರಿಗಳಾದ ಮಾದರಸ ಮತ್ತು ಸಾಯಣರ ಬಗ್ಗೆ ಈ ಕೆಳಕಂಡಂತೆ ಉಲ್ಲೇಖಿಸುತ್ತದೆ.

ತೋಡದ ಬಾವಿಯಿಲ್ಲ ಮರಕಟ್ಟಿದ ಪೇಗ್ಗರ್ಗೆಯಿಲ್ಲ ಲೀಲೆಯಂ
ಮಾಡದ ದೇವದ್ವಾಭವನಮಿಲ್ಲೊಳವಂ ಬಿಡದದಗ್ರಹಾರಮಿಂ
ಲ್ಲಾಡಲದೇನೋ ಭೂ ಭವನಭುಭುಪಕಮಾದುದು ಕೀರ್ತಿಮ್ರಾಪು ನಾ
ಪಾಡಿಯ ಸೃಪು ಮಾದರಸ ಸಾಯಣರೆಂಬ ಮಹಾಪ್ರಧಾನರಾ

ಮೇಲೆ ಉಲ್ಲೇಖಿಸಿದ ಎರಡು ಪದ್ಯಗಳಿಂದ ಭಾರತದಲ್ಲಿ, ಮುಖ್ಯವಾಗಿ ಮಧ್ಯಕಾಲೀನ ಭಾರತದಲ್ಲಿ, ನೀರಾವರಿ ವ್ಯವಸ್ಥೆ, ಕೆರೆಯನ್ನು ಕಟ್ಟಿಸುವುದು, ಮತ್ತು ಬಾವಿಗಳನ್ನು ತೋಡಿಸುವುದು ಅತಿ ಮುಖ್ಯವಾದ ಕೆಲಸವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಈ ಕೆಲಸವನ್ನು ಮಾಡಿಸುವುದು ಸಾಮಾಜಿಕ ಹಾಗೂ ನೈತಿಕ ಜವಾಬ್ದಾರಿಯಾಗಿತ್ತೆಂದೂ ಸಹ ತಿಳಿಯಬಹುದಾಗಿದೆ. ಪ್ರಾಚೈತಿಹಾಸಿಕ ಕಾಲದಿಂದ ಮುಖ್ಯವಾಗಿ ತಮಿಳುನಾಡಿನಲ್ಲಿ ಕಂಡುಬರುವ ಬೃಹತ್ ಶಿಲಾಯುಗ ಸಂಸ್ಕೃತಿಯ ಕಾಲಘಟ್ಟದಿಂದ ಕೆರೆಯನ್ನು ಕಟ್ಟಿಸಿ ಜಲವನ್ನು ಸಂಗ್ರಹಿಸಿ ಬಳಸಿಕೊಳ್ಳುತ್ತಿದ್ದರೆಂಬುದು ಪುರಾತತ್ವ ಶೋಧನೆಗಳಿಂದ ತಿಳಿದುಬಂದಿದೆ. ಈ ಕಾರ್ಯವು ಶತಮಾನಗಳಿಂದ ಸತತವಾಗಿ ಸಾಗುತ್ತಲೇ ಬಂದಿದ್ದು, ಮಧ್ಯಕಾಲೀನ ಭಾರತದಲ್ಲಿ ಅದು ತನ್ನ ಗರಿಷ್ಠ

ಮಟ್ಟವನ್ನು ತಲುಪಿತು ಎಂದರೇ ತಪ್ಪಾಗಲಾರದು. ಅನೇಕ ಪ್ರಾಚೀನ ಕೆರೆಗಳು ಇಂದಿಗೂ ಸಹ ಅತ್ಯಂತ ಸಮರ್ಪಕವಾಗಿ ಬಳಕೆಯಾಗುತ್ತಲಿವೆ ಎಂದು ಹೇಳಬಹುದು. ಇಂತಹ ಪ್ರಾಚೀನ ನೀರಾವರಿ ವ್ಯವಸ್ಥೆ ಕುರಿತು ಅನೇಕ ಸಂಶೋಧನೆಗಳು ನಡೆದು ಬಂದಿವೆ.

ಹಾವೇರಿ ಪ್ರದೇಶದಲ್ಲಿ ಹಾನಗಲ್ ತಾಲೂಕು–ಹಾನಗಲ್, ತಿಳುವಳ್ಳಿ, ಅಕ್ಕಿಆಲೂರು, ಆಡೂರು, ಚಿಕ್ಕಬಾಸೂರು. ಹಿರೇಕೆರೂರು ತಾಲೂಕು – ಮದಗ್ ಮಾಸೂರು, ಹಿರೇಕೆರೂರು, ಹಂಸಭಾವಿ, ಮಡ್ಲೂರು, ಸಾತೆನಳ್ಳಿ, ಚಿಕ್ಕೇರೂರು, ಗುಡ್ಡದಮಾದಾಪುರ, & ಹಳ್ಳೂರು, ರಾಣೇಬೆನ್ನೂರು ತಾಲೂಕು– ಅಸುಂಡಿ, ಮೇಡ್ಲೇರಿ, ಗುಡ್ಡಗುಡೂರು, ಹೊನ್ನತ್ತಿ, ರಾಣೇಬೆನ್ನೂರು, ಬ್ಯಾಡಗಿ ತಾಲೂಕು– ಕಾಗಿನೆಲೆ, ಕದರಮಂಡಲಗಿ, ಸವಣೂರು ತಾಲೂಕು–ಮಾದಾಪುರ, ಮೊತಿತಲಾಬ್‌ಕೆರೆ, ಮಾದಾಪುರ, ಇವುಗಳಲ್ಲಿ ಹತ್ತಿಮತ್ತೂರು ಹಿರೇಕೆರೂರ, ಹಾನಗಲ್ಲು, ಚಿಕ್ಕೇರೂರು, & ಮದಗ್ ಮಾಸೂರು ಕೆರೆಗಳು ಈ ಪ್ರದೇಶದಲ್ಲಿ ಇರುವ ಪ್ರಸಿದ್ಧ ಕೆರೆಗಳಾಗಿವೆ. ಈ ಭಾಗದಲ್ಲಿ ನಾಲೆ, ಕೆರೆ ಬಾವಿಗಳಿಂದ ವ್ಯವಸಾಯಕ್ಕೆ ನೀರಾವರಿ ಕಲ್ಪಿಸಲಾಗಿದೆ. ಹಾವೇರಿ ಪ್ರದೇಶದಲ್ಲಿ ನೈಋತ್ಯದಿಂದ ಪೂರ್ವಕ್ಕೆ ಕುಮದ್ವತಿ ನದಿ ಹಾಗೂ ಪೂರ್ವ ಮೇರೆಗೆ ಹೊಂದಿಕೊಂಡು ತುಂಗಭದ್ರ ಹಾಗೂ ಉತ್ತರದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ವರದಾ ನದಿ ಹರಿದಿದೆ. ಇವುಗಳಲ್ಲದೆ 1600 ಸಣ್ಣ ಕೆರೆಗಳು 3000 ಕ್ಕೂ ಹೆಚ್ಚು ಬಾವಿಗಳು ಈ ಪ್ರದೇಶದಲ್ಲಿ ಜಲಸಂಪನ್ಮೂಲಗಳಾಗಿವೆ. ಹಾಗೆಯೇ ತುಂಗಭದ್ರ ಎಡದಂಡೆಯುದ್ದಕ್ಕೂ ರೇವೆ ಮಣ್ಣಿನಪ್ರದೇಶವಿದೆ. ಕೆಲಕಡೆ ಕೆಂಪು & ಕಪ್ಪುಮಿಶ್ರಿತ ಮಣ್ಣಿನಿಂದಲೂಕೂಡಿದೆ. ಈ ಪ್ರದೇಶದಲ್ಲಿ ಜೋಳ, ಭತ್ತ, ಕಬ್ಬು, ರಾಗಿ, ಹೆಸರು, ಹುರಳಿ, ಕಡಲೆ, ತೊಗರಿ, ಮೆಣಸಿನಕಾಯಿ, ಶೇಂಗಾ, ಹತ್ತಿ, ಗೋವಿನಜೋಳ, ಅಲ್ಲಲ್ಲಿ ತೋಟದ ಬೆಳೆ ಹಾಗೂ ಇತರೆಡೆ ತೈಲಬೀಜಗಳನ್ನು ಬೆಳೆಯುತ್ತಾರೆ. ವ್ಯವಸಾಯದ ಜೊತೆಗೆ ಪಶುಪಾಲನೆಯೂ ಇದೆ ಎಂದು ಜೊತೆಗೆ ಹಾವೇರಿ ಪ್ರದೇಶದ ಕೆರೆಗಳ ನಿರ್ಮಾಣ ತಾಂತ್ರಿಕತೆ ಹೇಗಿತ್ತು ಎಂದು ಅಧ್ಯಯನದಿಂದ ತಿಳಿದುಬರುತ್ತದೆ.

**ಕೆರೆಯ ನಿರ್ಮಾಣದ ಕ್ರಮಗಳು**

ದಕ್ಷಿಣ ಭಾರತವನ್ನು ಒಳಗೊಂಡ ಕರ್ನಾಟಕದ ಭಾಗದ ಭೂ ಪ್ರದೇಶವನ್ನು ಆಳ್ವಿಕೆ ಮಾಡಿರುವಂತೆ ಹಾವೇರಿ ಪ್ರದೇಶದ ವ್ಯಾಪ್ತಿಗೆ ಒಳಪಟ್ಟು ಆಳ್ವಿಕೆ ಮಾಡಿದ ರಾಜಮನೆತನಗಳಾದ ಕದಂಬರು, ಬಾದಾಮಿ ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ವಿಜಯನಗರ ಅರಸರು ಹಾಗೂ ಅನೇಕ ಸ್ಥಳೀಯ ಮಾಂಡಲಿಕರು ತಮ್ಮದೇ ಆದ ಆಡಳಿತದ ಮಾರ್ಪಾಡುಗಳನ್ನು ಮಾಡಿಕೊಂಡು ಆಡಳಿತ ಮಾಡಿದ್ದಾರೆ. ಇವುಗಳು ಇತಿಹಾಸ ಪುಟದಿಂದ ಹಿಂದೆ ಸರಿದಿವೆ. ಆದರೆ ಆ ಕಾಲದಲ್ಲಿ ರಾಜ ಮಹಾರಾಜರು, ರಾಣಿಯರು, ಮಂತ್ರಿಗಳು, ದಂಡನಾಯಕರು, ಶ್ರೀಮಂತ ವರ್ಗದವರು ಹಾಗೂ ಜನಸಾಮಾನ್ಯರು ಸಮಾಜದ ಹಿತಕ್ಕಾಗಿ ಮಾಡಿದಂತಹ ಕೆಲಸ ಕಾರ್ಯಗಳ ಕುರುಹುಗಳಾಗಿ ಇಂದಿಗೂ ನಮ್ಮ ನಾಡಿನಲ್ಲಿ

ಅಳಿದುಳಿದಿರುವಂತಹ ಕುರುಹುಗಳಾಗಿ ಲಭ್ಯವಾಗುತ್ತವೆ. ಇವುಗಳೆಂದರೆ ಶಾಸನಗಳು, ನಾಣ್ಯಗಳು, ದೇವಾಲಯಗಳು ಸಾರ್ವಜನಿಕ ಕಟ್ಟಡಗಳು ರಕ್ಷಣೆಗಾಗಿ ನಿರ್ಮಾಣ ಮಾಡಿದಂತಹ ಕೋಟೆ ಕೊತ್ತಲಗಳು ಅದರಲ್ಲಿಯೂ ಪ್ರಮುಖವಾಗಿ ಕೆರೆ ಕಟ್ಟೆಗಳನ್ನು ನಿರ್ಮಾಣ ಮಾಡಿರುವುದನ್ನು ಈಗಲೂ ಸಹ ನಾವು ಇತಿಹಾಸದ ಆಧಾರಗಳಿಂದ ನೋಡಬಹುದಾಗಿದೆ.

ಕೆರೆ ನಿರ್ಮಾಣದ ಬಗ್ಗೆ ಹೀಗೇ ರಚಿಸಬೇಕೆಂಬ ನಿಖರವಾದ ಮಾಹಿತಿ ನಮಗೆ ಕಂಡುಬರುವುದಿಲ್ಲವಾದರೂ ಭಾರತೀಯ ಸಾಹಿತ್ಯ ಕೃತಿಗಳಲ್ಲಿ ವೇದಗಳಲ್ಲಿ ಕೂಪಗಳು, ಸರಸ್, ಕೃತ್ರಿಮ, ನದಿಯ ಎಂದು ಉಲ್ಲೇಖಿಸುತ್ತವೆ. ಪ್ರಾಚೀನ ಕಾಲದಲ್ಲಿ ಹೊಸ ಗ್ರಾಮವೊಂದನ್ನು ನಿರ್ಮಿಸುವಾಗ ಈ ಗ್ರಾಮದಲ್ಲಿ ಕೆರೆ ಇರಬೇಕೆಂದು ಈ ಗ್ರಾಮದ ಕೆರೆಯ ನೀರು ಕುಡಿಯುವುದಕ್ಕೆ ಮತ್ತು ವ್ಯವಸಾಯಕ್ಕೆ ಯೋಗ್ಯಕರವಾಗಿರಬೇಕೆಂದು ಕೆರೆಯ ನಿರ್ಮಾಣದಲ್ಲಿ & ಸಹಕರಿಸುತ್ತ ಪ್ರಜೆಗಳಿಗೆ ತೆರಿಗೆಯಲ್ಲಿ ವಿನಾಯಿತಿ ನೀಡಬೇಕೆಂದು ದಾಖಲಿಸುತ್ತಾನೆ.

ಕೆರೆಗಳ ನಿರ್ಮಾಣವು ಅತ್ಯಂತ ಪ್ರಾಚೀನ ಕಾಲಘಟ್ಟಗಳಿಂದ ಮುಂದುವರೆದು ಬಂದ ಸಂಸ್ಕೃತಿಯಾಗಿದೆ ಎಂದು ತಿಳಿದುಬರುತ್ತದೆ. ಕೆರೆಗಳ ನಿರ್ಮಾಣದ ಕಾರ್ಯದಲ್ಲಿ ಸಾಮಾನ್ಯವಾಗಿ ಉಪ್ಪಾರ ಜನಾಂಗದವರು ನಿರ್ಮಿಸುತ್ತಿದ್ದರೆಂದು ತಿಳಿದೇಬರುತ್ತದೆ & ಇದಕ್ಕೆ ಶಾಸನಾಧಾರಗಳಿವೆ ಕಟ್ಟೂರು ಎಂಬ ಮತ್ತೊಂದು ಜನಾಂಗ ಕೆರೆ ನಿರ್ಮಣದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆಂದು ಶಾಸನಗಳಲ್ಲಿ ಉಲ್ಲೇಖವಿದೆ. ಉಪ್ಪಾರರನ್ನು ಒಳಗೊಂಡು ಇತರ ವರ್ಗದ ಜನತೆ ಕೆರೆಯ ನಿರ್ಮಾಣಕ್ಕೆ ಸಹಕಾರಿಯಾಗುತ್ತಿದ್ದುದನ್ನು ಶಾಸನಗಳ ಅಧ್ಯಯನಗಳು ರುಜುವತಪಡಿಸುತ್ತವೆ. ಆದರೆ ಉಪ್ಪಾರರು ಮಣ್ಣಿನ ಗುಣಲಕ್ಷಣಗಳನ್ನು ಅರಿತಿದ್ದರಿಂದ ಕೆರೆಯ ಏರಿಯ ನಿರ್ಮಾಣವನ್ನು ಪ್ರಾಯಶಃ ಅವರ ಮೇಲ್ವಿಚಾರಣೆಯಲ್ಲಿ ನಡೆಸುತ್ತಿದ್ದರೆಂದು ಏರಿಯ ವಿವಿಧ ಭಾಗಗಳಿಗೆ ಬಳಸುತ್ತಿದ್ದ ಮಣ್ಣನ್ನು ಪರೀಕ್ಷಿಸಿ ಸೂಕ್ತ ಎಂದು ತಿಳಿಸಿದ ಮಣ್ಣನ್ನು ಏರಿಯ ನಿರ್ಮಾಣದಲ್ಲಿ ಬಳಸುತ್ತಿದ್ದರು ಎಂದು ಭಾವಿಸಬಹುದು.

ವಿಜಯನಗರ ಕಾಲದ ಒಂದು ಶಾಸನದಲ್ಲಿ ಕೆರೆ ನಿರ್ಮಾಣಕ್ಕೆ ಕುರಿತಾದ ಪೂರ್ಣ ಮಾಹಿತಿಯನ್ನು ನೀಡುತ್ತದೆ. ಆ ಶಾಸನವು ನಮ್ಮ ಅಧ್ಯಯನದಿಂದ ಹಲವಾರು ವಿಚಾರಗಳಿಗೆ ಸಂಬಂಧಿಸಿದಂತೆ ಕೆರೆಯನ್ನು ನಿರ್ಮಿಸುವಾಗ ನಿರ್ಮಾತೃ & ತಂತ್ರಜ್ಞನು ಹೊಂದಿರಬೇಕಾದ ಜ್ಞಾನದ & ಎಚ್ಚರಿಕೆಯ ಮಾಹಿತಿ ಗಳಷ್ಟೇ ಅಲ್ಲ, ನಿರ್ಮಾಣಕ್ಕೆ ವ್ಯಯಿಸಿದ ಹಣ & ಕಾಲ ಹಾಗೂ ಶ್ರಮಿಸಿದವರ ಶ್ರಮ ನೂರುಕಾಲ ಜನರಿಗೆ ಅನುಕೂಲವಾಗಬೇಕೆಂಬುದು ಇದರ ಪ್ರಮುಖ ಉದ್ದೇಶವಾಗಿದೆ.

ಕೆರೆಗಳು ಕೇವಲ ಒಮ್ಮ ವ್ಯಕ್ತಿಯಿಂದ ನಿರ್ಮಾಣವಾಗದೆ ಸಮುದಾಯದ ಚಟುವಟಿಕೆಯು ಇತ್ತು ಎಂದು ತಿಳಿಯುತ್ತದೆ. ಶಾಸನಗಳಲ್ಲಿ ಉಪ್ಪಾರರು ಕೆರೆಗಳನ್ನು ನಿರ್ಮಿಸುತ್ತಿದ್ದರೆಂದು ತಿಳಿಸುತ್ತದೆ. ಕೆರೆ ನಿರ್ಮಾಣಕ್ಕೆ ಭೂಮಿಯನ್ನು ಹಣವನ್ನು

ಬೇಕಾದ ಮಾನವ ಸಂಪನ್ಮೂಲವನ್ನು ಒದಗಿಸಿಕೊಳ್ಳುವುದು ತಂತ್ರಜ್ಞರು, ದೈವಜ್ಞರು & ಶ್ರಮಿಕವರ್ಗ ಮುಂತಾದ ಎಲ್ಲಾ ಸಮುದಾಯವರ್ಗದ ಶ್ರಮ ಕೆರೆಗಳ ನಿರ್ಮಾಣದಲ್ಲಿ ವಿನಿಯೋಗವಾಗಬೇಕೆಂಬುದು ಈ ನಿರ್ಮಾಣ ಪ್ರಕ್ರಿಯೆಯಲ್ಲಿ ಎಚ್ಚರಿಕೆಯನ್ನು & ಕ್ರಮವನ್ನು ಅನುಸರಿಸುವುದರ ಮೂಲ ಉದ್ದೇಶವಾಗಿದೆ.

ವಿಜಯನಗರ ಕಾಲದ ಶಾಸನವೊಂದು ಕೆರೆಗಳನ್ನು ನಿರ್ಮಿಸುವುದಕ್ಕೆ ಬಳಸುತ್ತಿದ್ದ ಸಾಮಗ್ರಿಗಳ ವಿವರವನ್ನು ನೀಡುತ್ತದೆ. ಶಾಸನವು ಹೇಳುವಂತೆ ಕೆರೆಯ ನಿರ್ಮಾಣಕ್ಕೆ ಕಲ್ಲು ತೂಪುಕಲ್ಲು, ಇಟ್ಟಿಗೆ ಸುಣ್ಣ, ಮತ್ತು ಗಾರೆಯನ್ನು ಬಳಸುತ್ತಿದ್ದರೆಂದು ತಿಳಿದುಬರುತ್ತದೆ. ಶಾಸನವು ಹೇಳುವ ಕಲ್ಲು ಪದವನ್ನು ಪ್ರಾಕೃತಿಕವಾಗಿ ದೊರೆಯುವ ಹೊರಳು ಕಲ್ಲುಗಳೆಂದು ಭಾವಿಸಬೇಕು. ಕಾರಣ ಕೆರೆಯ ಒಳಗರ್ಭ & ಹೊರಭಾಗದ ಸವಕಳಿಯನ್ನು ತಪ್ಪಿಸಲು ಹೊರಳು ಕಲ್ಲಿನ ಗೋಡೆಯನ್ನು ಕಟ್ಟಿಸಲಾಗುತ್ತಿತ್ತು.

ಕೆರೆಯ ಏರಿಯ ನಿರ್ಮಾಣ ಕಾಲದಲ್ಲಿ ಕರೆಯಿಂದ 10–15 ಅಡಿ ದೂರದಲ್ಲಿ ತೂಬನ್ನು ರಚಿಸಲಾಗುತ್ತಿತ್ತು. ಸಾಮಾನ್ಯವಾಗಿ ಇವು ಅಲಂಕಾರಗೋಂಡಿರುತ್ತಿದ್ದವು ತೂಬು ಕಿಂದಿಯನ್ನು ಕಲ್ಲು ಚಪ್ಪಡಿಗಳ ಸಹಾಯದಿಂದ ಅತ್ಯಂತ ಸುಭದ್ರವಾಗಿ ನಿರು ಸೋರಿಕೆಯಾಗದ ರೀತಿಯಲ್ಲಿ ರಚಿಸುತ್ತಿದ್ದರು. ಕೆರೆಯ ನಿರ್ಮಾಣದಲ್ಲಿ ತೂಬು ಅತ್ಯಂತ ಪ್ರಮುಖ ನಿರ್ಮಾಣವಾಗಿರುತ್ತಿತ್ತು, ಅಲ್ಲದೆ ಮಹತ್ವದ ಅಂಗವು ಕೆರೆಯ ಕೋಡಿಯಾಗಿತ್ತು.

ಕೆರೆಯು ಹಲವಾರು ಆಕಾರಗಳಲ್ಲಿ ರಚಿತವಾಗುತ್ತಿತ್ತು. ಬಹುತೇಕ ಸ್ಥಳೀಯ ಭೌಗೋಳಿಕ ಲಕ್ಷಣಗಳನ್ನು ಅನುಸರಿಸಿ ಕೆರೆಗಳು ತಮ್ಮ ಆಕಾರವನ್ನು ಪಡೆದುಕೊಳ್ಳುತ್ತಿದ್ದವು. ಹಾವೇರಿ ಪ್ರದೇಶದಲ್ಲಿ ಕೆರೆಗಳ ನಿರ್ಮಾಣದಲ್ಲಿ ಪ್ರಕೃತಿಯ ನೀರಿನ ಅನುಗುಣವಾಗಿ ಕಲ್ಲಿನ & ಮಣ್ಣಿನಿಂದ ವ್ಯವಸ್ಥಿತವಾಗಿ ಹಲವಾರು ಶೈಲಿಗಳಲ್ಲಿ ನಿರ್ಮಿಸಲಾಗಿದೆ ಎಂದು ಅಧ್ಯಯನದಿಂದ ತಿಳಿದುಬರುತ್ತದೆ.

**ಕೆರೆಯ ಏರಿ**

ಕೆರೆಯ ಅಂಗಾಂಶದಲ್ಲಿ ತೀರಾ ಮುಖ್ಯವಾದ ಅಂಗ ಕೆರೆಯ ಏರಿ. ಕರ್ನಾಟಕದಲ್ಲಿ ನಿರ್ಮಾಣವಾಗುತ್ತಿದ ಕೆರೆಗಳ ಏರಿಗಳ ರಚನೆಯನ್ನು ಮೊಟ್ಟ ಮೊದಲಿಗೆ ದಾಖಲಿಸಿದಾತ ಫ್ರಾನಿಸಿಸ್ ಬುಕಾನ್. ಈ ಅಂಗ ಕೆರೆ ಕ ಸಂಗ್ರಹಣ ಸಾಮರ್ಥ್ಯವನ್ನು ಆಧರಿಸಿ ತನ್ನ ಗಾತ್ರವನ್ನು ರೂಪಿಸಿಕೊಳ್ಳುತ್ತದೆ. ಹಾವೇರಿ ಪ್ರದೇಶದಲ್ಲಿ ಸಾಮಾನ್ಯವಾಗಿ ಬಹುತೇಕ ಕೆರೆಗಳು ಮಣ್ಣಿನ ಏರಿಗಳಾಗಿವೆ. ಇವು ಕೆರೆಯಲ್ಲಿ ಸಂಗ್ರಹವಾಗುವ ನೀರಿನ ಒತ್ತಡವನ್ನು ಎಲ್ಲ ಕಾಲದಲ್ಲಿಯೂ ತಡೆಯುವಷ್ಟು ಶಕ್ತಿಯುತವಾಗಿರಬೇಕು ಆದದ್ದರಿಮಂದಲೇ ಅವುಗಳನ್ನು ಕೆರೆಯ ಏರಿಗಳು ನೇರವಾಗದೆ ಅಂಕೊಡೊಂಕಿನ ಕ್ರಮದಲ್ಲಿ ನಿರ್ಮಿತಗೊಂಡಿರುತ್ತವೆ, ಈ ಬಗೆಯ ನಿರ್ಮಾಣ ಕೆರೆಯ ಮೇಲೆ ಬೀಳುವ ನೀರಿನ ಒತ್ತಡವನ್ನು ಕಡಿಮೆ ಮಾಡುತ್ತದೆ. ಅಲ್ಲದೆ ಕೆರೆ ಬಹು ಕಾಲದವರೆಗೆ ಬಾಳಿಕೆಗೆ ಬರುವಂತೆ ಕಾಯ್ದುಕೊಳ್ಳುತ್ತವೆ.

ಸಾಮಾನ್ಯವಾಗಿ ಕೆರೆಗಳ ನಿರ್ಮಾಣಕ್ಕೆ ಭದ್ರವಾದ ಪ್ರದೇಶಗಳನ್ನು ಆಯ್ಕೆಮಾಡಿಕೊಳ್ಳುತ್ತಿದ್ದರು ಎಂದು ಕೆರೆಗಳ ಅಧ್ಯಯನದಿಂದ ತಿಳಿದುಬರುತ್ತದೆ. ತಿಳುವಳ್ಳಿ ಕೆರೆಯ ಏರಿ ಬಹಳ ಉದ್ದವಾಗಿ ಹಾವಿನ ಹರಿವಿನ ಆಕಾರದಲ್ಲಿ ನಿರ್ಮಿಸಿದೆ, ಮದಗದ ಕೆರೆ ಏರಿ ಸಮಿಸ್ತಾರವಾಗಿ ಹರಡಿಕೊಂಡಿದೆ ಈ ರೀತಿಯಾಗಿ ಕೆರೆಯ ಏರಿಯ ನಿರ್ಮಾಣದ ವೈಶಿಷ್ಟ ವಿಶೇಷ ಶೈಲಿಯಲ್ಲಿದೆ.

ಜಲಾಶಯದ ಅಥವಾ ಕೆರೆಯ ವಿಸ್ತಾರವಾದ ನೀರು ಹರಿವಿನ ಮೇಲೆ ಬೀಸಿದ ಗಾಳಿಯಿಂದಾಗಿ ಕೆರೆಗಳಲ್ಲಿ ಅಲೆಗಳು ಉಂಟಾಗುತ್ತವೆ, ಈ ಅಲೆಗಳಿಂದ ಕೆರೆಗಳ ಏರಿಗಳನ್ನು ರಕ್ಷಿಸುವ ಸಲುವಾಗಿ ಕೆರೆಗಳ ಏರಿಯ ಒಳಗರ್ಭವನ್ನು ಬೃಹದಾಕಾರದ ಕಲ್ಲುಗಳನ್ನು ಜೋಡಿಸುವುದರ ಮೂಲಕ ನಿರ್ಮಿಸಲಾಗುತ್ತಿತ್ತು. ಈ ಕಲ್ಲು ಕಟ್ಟಡಗಳನ್ನು ರವಿಮೇಂಟ್ ಎಂದು ಕರೆಯಲಾಗುತ್ತದೆ. ಕೆರೆಯನ್ನು ಕಟ್ಟುವಾಗಲೂ ಈ ಕುಳುಗಳನ್ನು ಜೋಡಿಸಿ ಅವುಗಳು ಭಾರ ಮಣ್ಣಿನ ಏರಿ ಮೇಲೆ ಬೀಳುವಂತೆ ಇಳಿಜಾರನ್ನು ಮತ್ತು ಪ್ರತಿ ಕಲ್ಲಿನ ಸ್ತರದ ನಡುವೆ ಅಂತರವನ್ನು ಕಾಯ್ದುಕೊಂಡು ಅವು ಕೆರೆಯ ತಳಕ್ಕೆ ತಲುಪಲು ಮೆಟ್ಟಿಲುಗಳಾಗುವಂತೆ ನಿರ್ಮಿಸಿ ಕೆರೆಯ ಏರಿಗಳನ್ನು ರಕ್ಷಿಸಿಕೊಳ್ಳುತ್ತಿದ್ದರು. ಅಲ್ಲದೆ ಕೆಲವೊಂದಿಷ್ಟು ಅಧಿಕ ಮಳೆ ಬೀಳುವ ಪ್ರದೇಶದಲ್ಲಿನ ಏರಿಗಳನ್ನು ನಿರ್ಮಿಸುವಾಗ ಕೆರೆಯ ಹೊರ ಭಾಗಕ್ಕೂ ಕಲ್ಲು ಕಟ್ಟಡದ ರಕ್ಷಣೆಯನ್ನು ಒದಗಿಸುತ್ತಿದ್ದುದನ್ನು ಹಾವೇರಿ ಪ್ರದೇಶದಲ್ಲಿ ಈ ಮಾದರಿಯಲ್ಲಿ ಹಲವಾರು ಕೆರೆಗಳ ಅಧ್ಯಯನದಿಂದ ತಿಳಿದುಬರುತ್ತದೆ, ಅಲ್ಲದೆ ಪ್ರಸ್ತುತ ಆಧುನಿಕ ಕಾಲಘಟ್ಟದಲ್ಲಿಯೂ ಇಂತಹ ಮಾದರಿ ಮುಂದುವರೆದಿದೆ.

**ಪೂರಕ ಕಾಲುವೆಗಳು:**

ಕೆರೆಗಳು ಪ್ರಕೃತಿಧತ್ತವಾಗಿ ಮಾನವ ನಿರ್ಮಾಣ ಮಾಡಿದ್ದಾರೆ, ಆ ಸಂದರ್ಭದಲ್ಲಿ ಕೆಲವು ಕೆರೆಗಳಿಗೆ ನೀರು ಹರಿಪಿಕೆ ಕಡಿಮೆಯಾದಾಗ ಅಲ್ಲಿಯೇ ಸಮೀಪ ವೃರ್ಥವಾಗಿ ಹರಿದು ಹೋಗುತ್ತಿದ್ದ ನೀರನ್ನು ಬಳಸಲು ನಾಲೆಗಳನ್ನು ಅಥವಾ ಕಾಲುವೆಗಳನ್ನು ನಿರ್ಮಾಣ ಮಾಡಿ ಆ ಮೂಲಕ ನೀರನ್ನು ಹರಿಸಲಾಗುತ್ತಿತ್ತು. ಇಂತಹ ಮಾಹಿತಿ ಕ್ರಿ.ಶ 1388 ರ ಗೌರಿಬಿದನೂರಿನ ಕಲೋಳರ ಶಾಸನವು ಇದೇ ಬಗೆಯ ಕಾಲುವೆಯೊಂದನ್ನು ಉಲ್ಲೇಖಿಸುತ್ತದೆ. ಇಂತಹ ಪೂರಕ ಕಾಲುವೆಗಳು ಹಾವೇರಿ ಪ್ರದೇಶದ ಕೆರೆಗಳು ಕಂಡುಬರುತ್ತವೆ.

**ಕೆರೆಯ ತೂಬುಗಳು:**

ಕೆರೆಯಲ್ಲಿ ಸಂಗ್ರಹವಾದ ನೀರನ್ನು ಕೆರೆಯಿಂದ ಹೊರಗೆ ಹರಿಸುವ & ಬೇಕೆಂದಾಗ ನಿಲ್ಲಿಸಬಹುದಾದ ಅಂಗವೆ ತೂಬುಗಳು. ಈ ತೂಬುಗಳು ಸಂಗ್ರಹವಾದ ನೀರನ್ನು ಬಳಕೆಗೆ ಅನುಗುಣವಾಗಿ ನಿಯಂತ್ರಿಸಲು ಸಹಾಯ ಮಾಡುತ್ತವೆ. ಸೂಕ್ಷ್ಮವಾಗಿ ಹೇಳುವುದಾದರೆ ತೂಬುಗಳನ್ನು ಇಂದಿನ ನಳಗಳಿಗೆ ಹೋಲಿಸಬಹುದಾಗಿದೆ. ಕಲ್ಲಿನಿಂದ ನಾಲ್ಕು ಪ್ರತ್ಯೇಕ ಕಲ್ಲಿನ ತುಲೇಗಳು ಅವುಗಳ ಮಧ್ಯದಲ್ಲಿ ತೂಬಿನ

ಬಿರುಗಡೆಯನ್ನು ಮೇಲಕೆ ಎತ್ತಲು & ಇಳಿಸಲು ಸಹಾಯಕವಾಗುವಂತೆ ಅಡ್ಡಕಲ್ಲನ್ನು ಹಾಕಿ ನಿರ್ಮಿಸಿರುತ್ತಾರೆ. ಇದರ ಅಳತೆಗೆ ಅನುಗುಣವಾಗಿ ಈ ಅಡ್ಡಕಲ್ಲಿನಲ್ಲಿ ರಂಧ್ರವಿರುತ್ತದೆ. ಈ ಮರದ ತೂಬನ್ನು ಅಥವಾ ಬಿರುಗಡೆಯನ್ನು ಮೇಲಕೆ ಎತ್ತಿದಾಗ ಏರಿಯ ತಳಭಾಗದಲ್ಲಿ ನಿರ್ಮಿಸಿರುವ ಕವಾಟದ ಮೂಲಕ ನೀರು ಅಚ್ಚುಕಟ್ಟು ಪ್ರದೇಶವನ್ನು ತಲುಪುವ ನಾಲೆಗಳಲ್ಲಿ ಹರಿಯುತ್ತದೆ. ಈ ಭಾಗದಲ್ಲಿ ಮರದ ಬಿರುಡೆಯನ್ನು ಬಳಸುವುದರಿಂದ ಮರವು ನೀರಿನ ಅಂಶವನ್ನು ಪಡೆದು ವಿಸ್ತರಿಸಿದಾಗ ಕವಾಟದ ಮೂಲಕ ಜಲ ಸೋರಿಕೆಯನ್ನು ಸುಲಭವಾಗಿ ತಡೆಯಲಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಲೋಹದ ಬಿರುಡೆಗಳನ್ನು ಬಳಸಲಾಗುತ್ತದೆ. ಪ್ರಾಚೀನ ಕಾಲದ ಹಾವೇರಿ ಪ್ರದೇಶದ ಕೆರೆಗಳಲ್ಲಿ ಇವುಗಳನ್ನು ಕಲ್ಲುಗಳಿಂದ ರಚಿಸುತ್ತಿದ್ದರು. ತೂಬುಗಳನ್ನು ನೋಡಿಕೊಳ್ಳಲು ಅಥವಾ ನಿರ್ವಹಿಸಲು ಪ್ರತ್ಯೇಕವಾಗಿ ನೀರುಗುಂಟಿಗಳ ನೇಮಕವಾಗುತ್ತಿದ್ದರು ಎಂದು ಅಧ್ಯಯನಗಳಿಂದ ತಿಳಿದುಬರುತ್ತದೆ.

**ಕೆರೆಯ ಕೋಡಿಗಳು:**

ಕೆರೆಗಳ ಏರಿಯಷ್ಟೇ ಮುಖ್ಯವಾದ ಮತ್ತೊಂದು ಅಂಗ ಕೆರೆಯಕೋಡಿ ಕೆರೆಯನ್ನು ನಿರ್ಮಾಣ ಮಾಡುವ ತಂತ್ರಜ್ಞನಿಗೆ ಇರಬೇಕಾದ ಬಹುಮುಖ ಜ್ಞಾನವೆಂದರೆ ಕೋಡಿಯನ್ನು ನಿರ್ಮಿಸುವ ಸ್ಥಳವನ್ನು ಆಯ್ಕೆ ಮಾಡಿಕೊಳ್ಳುವುದು ಸಾಮಾನ್ಯವಾಗಿ ಕೋಡಿಯು ಕೆರೆಯ ಏರಿಗೆ ವಿರುದ್ಧ ದಿಕ್ಕಿನಲ್ಲಿ ಅಥವಾ ಹೆಚ್ಚಿನ ಹರಿವು ಕೆರೆಯನ್ನು ಸಮೀಪಿಸಿದಂತೆ ಆಯಕಟ್ಟಿನ ಪ್ರದೇಶದಲ್ಲಿರುತ್ತದೆ. ಕೆರೆಯಲ್ಲಿ ನೀರು ಸಂಗ್ರಹವಾಗಿ ತನ್ನ ಗರಿಷ್ಠ ಮಟ್ಟವನ್ನು ತಲುಪಿದಾಗ ಹೆಚ್ಚಿನ ಹರಿವು ಕೋಡಿಗಳ ಮೂಲಕ ಹರಿದು ಹೋಗುತ್ತದೆ. ಇದು ಕೆರೆಯ ಒಡ್ಡನ್ನು ಮತ್ತು ಕೆರೆಯ ಅಚ್ಚುಕಟ್ಟು ಪ್ರದೇಶವನ್ನು ರಕ್ಷಿಸುವ ಮಹತ್ವದ ಅಂಗ. ಕೆರೆಯ ಕೋಡಿ ಬಂದಿತ್ತೆಂದರೆ ಆ ಕೆರೆ ತನ್ನ ಗರಿಷ್ಠ ಸಂಗ್ರಹಣ ಸಾಮರ್ಥ್ಯವನ್ನು ಮುಟ್ಟಿತ್ತು ಎಂದರ್ಥ. ಕೆಲವೊಂದಿಷ್ಟು ಕೆರೆಗಳಿಗೆ ಎರಡೇರಡು ಕೋಡಿಗಳಿರುವುದುಂಟು ಇವುಗಳಿಗೆ ಕಲ್ಲುಗಳನ್ನು ಮತ್ತು ಗಾರೆಯನ್ನು ಬಳಸಿ ನಿರ್ಮಿಸಿರುತ್ತಾರೆ. ಕೋಡಿಯ ದ್ವಾರವನ್ನು ಸುಬದ್ರವಾಗಿ ಕಲ್ಲಿಂದಲೇ ನಿರ್ಮಿಸಿರುತ್ತಾರೆ. ಕೆಲವೊಂದು ಸಂದರ್ಭದಲ್ಲಿ ಕೆರೆಯ ಏರಿಗಳು ಮತ್ತು ಕೋಡಿಗಳ ಸಂಪರ್ಕ ಮಾರ್ಗವಾಗಿದ್ದಾಗ ಕಲ್ಲು ಕಂಬಗಳನ್ನು ಆಧಾರಿಸಿದ ಸಂಪರ್ಕ ಸೇತುವೆ ಇರುವುದು ಕಂಡುಬರುತ್ತದೆ. ಕೆಲವು ಕೋಡಿಗಳಿಂದಲೂ ಹಾವೇರಿ ಪ್ರದೇಶದಲ್ಲಿ ನೀರಾವರಿಗೆ ನೀರು ಬಳಕೆ ಮಾಡುತ್ತಿದ್ದರು ಎಂದು ವಿವಿಧ ಕೆರೆಗಳ ಅಧ್ಯಯನದಿಂದ ತಿಳಿದುಬರುತ್ತದೆ.

**ಅಚ್ಚುಕಟ್ಟು ಪ್ರದೇಶ:**

ಕೆರೆಯ ನೀರು ಸಂಗ್ರಹವಾದ ವಿರುದ್ಧ ದಿಕ್ಕಿನಲ್ಲಿ ಅಥವಾ ಏರಿಯ ಕೆಳಗೆ ವ್ಯವಸಾಯಕ್ಕೆ ಒಳಪಡುವ ಪ್ರದೇಶವನ್ನು ಆಯಕಟ್ಟು ಅಥವಾ ಅಚ್ಚುಕಟ್ಟು ಪ್ರದೇಶವೆಂದು ಕರೆಯುತ್ತಾರೆ. ಆಯಕಟ್ಟು ಅಥವಾ ಅಚ್ಚುಕಟ್ಟು ಪ್ರದೇಶವನ್ನು ವಿಜಯನಗರ ಕಾಲದ ಹಲವಾರು ಶಾಸನಗಳು ಮತ್ತು ಅದರ ಹಿಂದಿನ ಶಾಸನಗಳಲ್ಲಿ

ಕೆರೆಯ ಶಾಸನಗಳ ಭೂಮಿಯೆಂದು ದಾಖಲಾಗಿರುವ ಕೆರೆಯ ನೀರಾವರಿಯ ಬಗ್ಗೆ ಅಧ್ಯಯನ ಮಾಡಿ ವಿದ್ವಾಂಸರು ತಮ್ಮ ಗ್ರಂಥಗಳಲ್ಲಿ ಹಾಗೂ ಲೇಖನಗಳಲ್ಲಿ ಉದಾಹರಿಸಿರುವುದನ್ನು ಕಾಣಬಹುದಾಗಿದೆ. ಉದಾಹರಣೆ ಮದಗ್ ಮಾಸೂರು ಕೆರೆಯ ಅಚ್ಚುಕಟ್ಟು ಪ್ರದೇಶ ವಿಸ್ತಾರವಾಗಿರುವುದನ್ನು ನೋಡಬಹುದು. ಅಲ್ಲದೆ ಇತರ ಕೆರೆಗಳಾದ ಹೊನ್ನತ್ತಿ ಕೆರೆ, ತಿಳುವಳ್ಳಿ ಕೆರೆ, ಹಿರೇಕೆರೂರು ಕೆರೆ, ಸವಣೂರು ಕೆರೆ. ಹತ್ತಿಮತ್ತೂರು ಕೆರೆ, ಹಾನಗಲ್ಲು ಕೆರೆ ಇತ್ಯಾದಿ ಕೆರೆಗಳು ಹಾವೇರಿ ಪ್ರದೇಶದಲ್ಲಿ ಅಚ್ಚುಕಟ್ಟು ಪ್ರದೇಶವಿರುವುದು ಕಂಡುಬರುತ್ತದೆ.

**ಉಪಸಂಹಾರ:**

ಪೂರ್ವ ಇತಿಹಾಸದಲ್ಲಿ ಜನರು ನೆಲೆಯೂರಿದ ಬಗ್ಗೆ ಹಾಗೂ ಜನರು ನೀರಿನ ಆಸರೆಗಾಗಿ ನದಿ ಕಣಿವೆಗಳು ಬೆಟ್ಟಗುಡ್ಡದ ತಳಹದಿಯಲ್ಲಿ ನೆಲೆ ಹೂಡಿರುವುದರ ಬಗ್ಗೆ ಇತ್ತೀಚಿನ ಸಂಶೋಧನೆಗಳಿಂದ ಮಾಹಿತಿ ದೊರೆಯುತ್ತದೆ. ಐತಿಹಾಸಿಕ ಕಾಲಘಟ್ಟಕ್ಕೆ ಬರುವುದಾದರೆ ಅದರಲ್ಲೂ ರಾಜಮಹಾರಾಜರ ಆಳ್ವಿಕೆಯ ಕಾಲದಲ್ಲಿ ಜನರಿಗೆ ಅವಶ್ಯಕವಾದ ಆಹಾರ & ಪ್ರಾಣ ಜಲಕ್ಕಾಗಿ ಪ್ರಕೃತಿದತ್ತವಾಗಿ ಹರಿಯುವ ನದಿ ಕಣಿವೆಗಳಿಗೆ ಅಡ್ಡಲಾಗಿ ಅಣೆಕಟ್ಟುಗಳನ್ನು ಹಾಗೂ ಹಳ್ಳ ಕೊಳ್ಳಗಳಿಗೆ ಕೆರೆ ಕಟ್ಟೆಗಳನ್ನು ನಿರ್ಮಿಸಿಕೊಂಡು ನೀರನ್ನು ತಡೆಯಿಡಿದು ಬೇಸಿಗೆ ಕಾಲದಲ್ಲಿ ಬಳಸಿಕೊಳ್ಳಲು ಅನುಕೂಲ ಮಾಡಿಕೊಟ್ಟಿರುವುದು ಅವರ ಏಳಿಗೆಗೆ ಕಾರಣವಾಗಿರುತ್ತದೆ. ಅಲ್ಲದೆ ಹೀಗೆ ವ್ಯವಸಾಯಕ್ಕೆ ನದಿ ಕಣಿವೆ ಕೆರೆಕಟ್ಟೆಗಳಿಂದ ನೀರನ್ನು ಬಳಸಿಕೊಳ್ಳುವ ಉಪಯೋಗವನ್ನು ಕಂಡುಹಿಡಿದು, ಈ ಕಾರ್ಯವು ದೇವರ ಕೆಲಸವೆಂದು ನಮ್ಮ ಜನ ನಂಬಿಕೆಯಿಂದ ಆ ಕಾರ್ಯದಲ್ಲಿ ಮುಂದುವರೆದರು ಎಂದು ಹಾವೇರಿ ಪ್ರದೇಶದಲ್ಲಿಯ ಕೆರೆಗಳ ಅಧ್ಯಯನದಿಂದ ತಿಳಿದುಬರುತ್ತದೆ.

ಕೆರೆಗಳು ಕೇವಲ ಒಮ್ಮ ವ್ಯಕ್ತಿಯಿಂದ ನಿರ್ಮಾಣವಾಗದೆ ಸಮುದಾಯದ ಚಟುವಟಿಕೆಯು ಕೆಲಸವಾಗಿತ್ತೆಂದು ತಿಳಿಯುತ್ತದೆ. ಶಾಸನಗಳಲ್ಲಿ ಉಪ್ಪಾರರು ಕೆರೆಗಳನ್ನು ನಿರ್ಮಿಸುತ್ತಿದ್ದರೆಂದು ತಿಳಿಸುತ್ತದೆ. ಕೆರೆ ನಿರ್ಮಾಣಕ್ಕೆ ಭೂಮಿಯನ್ನು ಹಣವನ್ನು ಬೇಕಾದ ಮಾನವ ಸಂಪನ್ಮೂಲವನ್ನು ಒದಗಿಸಿಕೊಳ್ಳುವುದು ತಂತ್ರಜ್ಞರು, ದೈವಜ್ಞರು & ಶ್ರಮಿಕವರ್ಗ ಮುಂತಾದ ಎಲ್ಲಾ ಸಮುದಾಯವರ್ಗದ ಶ್ರಮ ಕೆರೆಗಳ ನಿರ್ಮಾಣದಲ್ಲಿ ವಿನಿಯೋಗವಾಗಬೇಕೆಂಬುದು ಈ ನಿರ್ಮಾಣ ಪ್ರಕ್ರಿಯೆಯಲ್ಲಿ ಎಚ್ಚರಿಕೆಯನ್ನು & ಕ್ರಮವನ್ನು ಅನುಸರಿಸುವುದರ ಮೂಲ ಉದ್ದೇಶವಾಗಿದೆ. ಕೆರೆ ಕಟ್ಟೆಗಳ ನಿರ್ಮಾಣದಿಂದ ವ್ಯವಸಾಯ ಮಾನವನ ದಿನನಿತ್ಯದ ಬಳಕೆ, ಪ್ರಾಣಿ ಪಕ್ಷಿಗಳು ಜಲಚರಗಳಿಗೆ ಈ ಕೆರೆ ಕಟ್ಟೆಗಳು ಆಶ್ರಯ ನೀಡಿ ಪ್ರಾಣಿ ಸಂಕುಲದ ಬೆಳವಣಿಗೆಗೆ ನಾಂದಿಯಾಯಿತೆಂದರೆ ತಪ್ಪಾಗಲಾರದು. ನೀರನ್ನು ಉಪಯೋಗಿಸಿಕೊಂಡು ಬೆಳೆಯನ್ನು ಬೆಳೆಯಲು ಪ್ರಾರಂಭಿಸಿದ ನಮ್ಮ ಪೂರ್ವಿಕರು ಆರ್ಥಿಕವಾಗಿ ಸಮೃದ್ಧಿಯನ್ನು ಹೊಂದಿ ಮಾನಸಿಕ ನೆಮ್ಮದಿಯನ್ನು ಕಂಡುಗೊಂಡು ಅದರಲ್ಲಿಯೇ ಮುಂದುವರೆದು ಶತಶತಮಾನಗಳ ಕಾಲದಿಂದಲೂ ಮಾರ್ಪಾಡಾಗುತ್ತಾ

ತಾಂತ್ರಿಕತೆಯನ್ನು ಮೈಗೂಡಿಸಿಕೊಂಡು ನೀರನ್ನು ಸಂಗ್ರಹಿಸುವಂತಹ ಪ್ರಯತ್ನವನ್ನು ಮಾಡಿರುವುದಕ್ಕೆ ಸಂಬಂಧಿಸಿದಂತೆ ನಮ್ಮ ನಾಡಿನಾದ್ಯಂತ ಈಗಲೂ ಅಳಿದುಳಿದುಕೊಂಡು ಬಂದಿರುವಂತಹ ಕೆರೆ ಕಟ್ಟೆಗಳೇ ಇದಕ್ಕೆ ಸಾಕ್ಷಿಯಾಗಿ ನಿಂತಿವೆ ಎಂದರೇ ತಪ್ಪಾಗಲಾರದು. ಕೆರೆಗಳು ಕೇವಲ ಒಮ್ಮ ವ್ಯಕ್ತಿಯಿಂದ ನಿರ್ಮಾಣವಾಗದೆ ಸಮುದಾಯದ ಚಟುವಟಿಕೆಯು ಆಗಿತ್ತೆಂದು ತಿಳಿಯುತ್ತದೆ. ಶಾಸನಗಳಲ್ಲಿ ಉಪ್ಪಾರರು ಕೆರೆಗಳನ್ನು ನಿರ್ಮಿಸುತ್ತಿದ್ದರೆಂದು ತಿಳಿಸುತ್ತದೆ. ಕೆರೆ ನಿರ್ಮಾಣಕ್ಕೆ ಭೂಮಿಯನ್ನು ಹಣವನ್ನು ಬೇಕಾದ ಮಾನವ ಸಂಪನ್ಮೂಲವನ್ನು ಒದಗಿಸಿಕೊಳ್ಳುವುದು ತಂತ್ರಜ್ಞರು, ದೈವಜ್ಞರು & ಶ್ರಮಿಕವರ್ಗ ಮುಂತಾದ ಎಲ್ಲಾ ಸಮುದಾಯವರ್ಗದ ಶ್ರಮ ಕೆರೆಗಳ ನಿರ್ಮಾಣದಲ್ಲಿ ವಿನಿಯೋಗವಾಗಬೇಕೆಂಬುದು ಈ ನಿರ್ಮಾಣ ಪ್ರಕ್ರಿಯೆಯಲ್ಲಿ ಎಚ್ಚರಿಕೆಯನ್ನು & ಕ್ರಮವನ್ನು ಅನುಸರಿಸುವುದರ ಮೂಲ ಉದ್ದೇಶವಾಗಿದೆ ಎಂದು ಹಾವೇರಿ ಪ್ರದೇಶದ ಕೆರೆಗಳ ನಿರ್ಮಾಣ ಕ್ರಮಗತಿಯ ತಾಂತ್ರಿಕತೆ ಹೇಗಿತ್ತು ಎಂದು ಅಧ್ಯಯನದಿಂದ ತಿಳಿದುಬರುತ್ತದೆ.

**ಪರಾಮರ್ಶನ ಗ್ರಂಥಗಳು:**

1. ಭಗವತಿ ಎಸ್.ಎಸ್. ಮತ್ತು ಮೇಲಿನಮನೆ ಹೆಚ್.ಎಸ್., (2004), ಕನ್ನಡ ಶಾಸನಗಳ ಅಧ್ಯಯನ, ಗದಗ: ವಿದ್ಯಾನಿಧಿ ಪ್ರಕಾಶನ.
2. ನಾಯಕ ಹಾ.ಮಾ. (ಪ್ರ.ಸಂ.), (1969), ಕನ್ನಡ ವಿಷಯ ವಿಶ್ವಕೋಶ, ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ.
3. ಜಿಲ್ಲಾ ಸಂಖ್ಯಾಧಿಕಾರಿ, (2018), ಹಾವೇರಿ ಜಿಲ್ಲೆಯ ಅಂಕಿ ಅಂಶಗಳ ನೋಟ 2017–2018, ಹಾವೇರಿ: ಜಿಲ್ಲಾ ಸಂಖ್ಯಾಧಿಕಾರಿಗಳ ಕಚೇರಿ.
4. ಪಂಚಮುಖಿ ಆರ್.ಎಸ್., (1967), ಕರ್ನಾಟಕ ಇತಿಹಾಸ, ಧಾರವಾಡ: ಕರ್ನಾಟಕ ಐತಿಹಾಸಿಕ ಸಂಶೋಧನಾ ಮಂಡಲ.
5. ಚಂದ್ರಶೇಖರ ಎನ್. (ಮುಖ್ಯ ಸಂ.), (2015), ಕರ್ನಾಟಕ ಗ್ಯಾಸೆಟಿಯರ್, ಬೆಂಗಳೂರು: ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಕರ್ನಾಟಕ ಸರ್ಕಾರ.
6. ಗೋಪಾಲ ಬಾ.ರಾ., ಕರ್ನಾಟಕದಲ್ಲಿ ನವಶಿಲಾಯುಗ, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
7. ಕಾಮತ್ ಸೂರ್ಯನಾಥ ಯು. (ಮುಖ್ಯ ಸಂ.), (1995), ಕರ್ನಾಟಕ ರಾಜ್ಯ ಗ್ಯಾಸೆಟಿಯರ್: ಧಾರವಾಡ ಜಿಲ್ಲೆ, ಬೆಂಗಳೂರು: ಕರ್ನಾಟಕ ಗ್ಯಾಸೆಟಿಯರ್ ಇಲಾಖೆ.
8. ಕಲಬುರ್ಗಿ ಎಂ.ಎಂ. (ಸಂ.), (1975), ಧಾರವಾಡ ಜಿಲ್ಲೆಯ ಶಾಸನ ಸೂಚಿ, ಧಾರವಾಡ:

ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ.
9. ಚಿದಾನಂದಮೂರ್ತಿ ಎಂ., (2002), ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ತೃತೀಯ ಮುದ್ರಣ), ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
10. ಬಡಿಗೇರ ವೀರೇಶ, (2010), ಶಾಸನಗಳಲ್ಲಿ ಆಯಗಾರಿಕೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
11. ಹೆಗಡೆ ರಾಘುರಾಮ (ಸಂ.), (2002), ಕೆರೆ ನೀರಾವರಿ ನಿರ್ವಹಣೆ: ಚಾರಿತ್ರಿಕ ಅಧ್ಯಯನ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
12. ಪೂಜಾರಹಳ್ಳಿ ವಿರೂಪಾಕ್ಷಿ, (1999), ಜಲಸಂಬಂಧಿ ಚಳುವಳಿಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.